# 1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಕೆ.ಆರ್.ನಗರ .

## ಸಿ.ಸಿ ನಂಃ 636/ 2019

| | | |
|---|---|---|
| ಸಾಕ್ಷಿಯ ಹೆಸರಃ | ಪ್ರದೀಪ್ ಟಿ. | ಫ್ರಾಸಾಃ 2 |
| ತಂದೆಯ ಹೆಸರುಃ | ಪರಮೇಶ್ವರ | ಚಾಸಾಃ 4 |
| ವಯಸ್ಸುಃ | 42 ವರ್ಷ | ದಿಃ 17-03-2026 |
| ಉದ್ಯೋಗಃ | ಮುಖ್ಯ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಸಾಲಿಗ್ರಾಮ | |

## ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನಾನು 2014 ರಿಂದ 2022 ರವರೆಗೆ ಕೆ.ಆರ್.ನಗರದ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತಿರುತ್ತೇನೆ.

ದಿಃ 12.06.2016 ರಂದು ಬೆಳಿಗ್ಗೆ 9.00 ಗಂಟೆಯಿಂದ ಡೋರನಹಳ್ಳಿ ಚರ್ಚ್ ಜಾತ್ರಾ ಮಹೋತ್ಸವಹ ಪ್ರಯುಕ್ತ ನಾನು, ಚಾಸಾ-1 ರಿಂದ ಚಾಸಾ-3 ರವರು ನಮ್ಮ ಇಲಾಖಾ ಇಂಟರ್ ಸಪ್ಟೆರ್ ವಾಹನದಲ್ಲಿ  ಗಸ್ತು ಕರ್ತವ್ಯ ಮಾಡುತ್ತಿದ್ದಾಗ ಮಧ್ಯಾಹ್ನ 12.00 ಗಂಟೆಗೆ ಶೆಡ್ ಬಳಿ ಒಬ್ಬ ವ್ಯಕ್ತಿ ಅಕ್ರಮ ಮದ್ಯ ದಾಸ್ತಾನು ಹೊಂದಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ಚಾಸಾ-1 ರವರಿಗೆ ಬಂದ ಬಾತ್ಮಿ ಬಂದಿರುತ್ತದೆ. ನಂತರ ಜಾತ್ರಾ ಮಹೋತ್ಸವಕ್ಕೆ ಬಂದವರ ಪೈಕಿ ಚಾಸಾ-5 ಮತ್ತು 6 ರವರನ್ನು ಪಂಚರಾಗಿ ಸಹಕರಿಸುವಂತೆ ಕೋರಿಕೊಂಡ ಮೇರೆಗೆ, ಸದರಿಯವರು ಪಂಚರಾಗಿ ಬರಲು ಒಪ್ಪಿರುತ್ತಾರೆ.

ನಂತರ ಬಾತ್ಮೀ ಬಂದ ಸ್ಥಳವಾದ ಶೆಡ್ ಬಳಿ ಹೋಗಿ ಸುತ್ತುವರೆದು ಸದರಿ ಶೆಡ್ಡಿನಲ್ಲಿದ್ದ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ, ತನ್ನ ಹೆಸರು ಸೋಮಶೇಖರ ಬಿನ್ ಸ್ವಾಮಿನಾಥ, ಗದ್ದೆಹೊಸಹಳ್ಳಿ ಗ್ರಾಮ ಎಂದು ತಿಳಿಸಿರುತ್ತಾರೆ. ನಂತರ ಆರೋಪಿಗೆ ಬಾತ್ಮೀ ಬಂದ ವಿಷಯವನ್ನು

ತಿಳಿಸಿ, ಮದ್ಯವನ್ನು ಹೊಂದಿ ಮಾರಾಟ ಮಾಡಲು ನಿಮ್ಮ ಬಳಿ ಯಾವುದಾದರೂ ಪರವಾನಿಗೆ ಇದೆಯೇ ಎಂದು ಕೇಳಿದಾಗ, ತನ್ನ ಬಳಿ ಆ ರೀತಿ ಯಾವುದೇ ಪರವಾನಿಗೆ ಇಲ್ಲ ಎಂದು ಆರೋಪಿಯು ಹೇಳಿರುತ್ತಾರೆ.

ನಂತರ, ಆರೋಪಿಯ ಕೈಯಲ್ಲಿದ್ದ ಚೀಲವನ್ನು ಪರಿಶೀಲಿಸಲಾಗಿ ಅದರ ಒಳಗೆ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಕಂಡುಬಂದಿದ್ದು, ಅದನ್ನು ಪಂಚರ ಸಮಕ್ಷಮ ಎಣಿಸಿ ನೋಡಲಾಗಿ 180 ಎಂ.ಎಲ್ ನ 16 ವಿನ್ಸನ್ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಹಾಗೂ 90 ಎಂ.ಎಲ್ ನ 25 ವಿನ್ಸನ್ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು, 90 ಎಂ.ಎಲ್ ನ 20 ಓರಿಜಿನಲ್ ಚಾಯ್ಸ್ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳುಇದ್ದವು.

ನಂತರ ಸ್ಥಳದಲ್ಲಿ ದೊರೆತ ಎಲ್ಲ ಮದ್ಯಗಳ ಪೈಕಿ ತಲಾ 2 ಪ್ಯಾಕೇಟ್ ಮದ್ಯಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿಯಾಗಿ ಪಡೆಯಲಾಗಿರುತ್ತದೆ. ಸ್ಥಳದಲ್ಲಿ ದೊರೆತ ಎಲ್ಲ ಮದ್ಯಗಳನ್ನು ಬಿಳಿ ಚೀಲ ತಯಾರಿಸಿ ಅದರಲ್ಲಿ ಹಾಕಿ ದಾರದಿಂದ ಹೊಲೆದು ಅರಗನ್ನು ಹಾಕಿ ಇಲಾಖಾ ಮುದ್ರೆಯ ಮೊಹರು ಮಾಡಲಾಯಿತು.

ಘಟನಾ ಸ್ಥಳದ ಪಂಚನಾವೆಯನ್ನು ಮಧ್ಯಾಹ್ನ 12.30 ಗಂಟೆಯಿಂದ 1.30 ಗಂಟೆಯವರೆಗೆ ಸ್ಥಳದಲ್ಲಿಯೇ ನಮ್ಮ ಸಮಕ್ಷಮ ಬರೆಯಲಾಗಿರುತ್ತದೆ. ನಂತರ ಆರೋಪಿಯ ದಸ್ತಗಿರಿ ಕ್ರಮವನ್ನು ಜರುಗಿಸಿ ದೊರೆತ ಮದ್ಯ ಮತ್ತು ಆರೋಪಿಯ ಸಮೇತ ಠಾಣೆಗೆ ಬಂದು ಪ್ರಕರಣವನ್ನು ದಾಖಲಿಸಲಾಗಿರುತ್ತದೆ. ನಿಪಿ.1 ರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿಯು ನೋಡಿ ಗುರತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು.

ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ಹಾಗೂ ಮುದ್ದೆ ಮಾಲು-1 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಈ ಪ್ರಕರಣದ ಬಗ್ಗೆ ನಾನು ತನಿಖಾಧಿಯರವರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಡಿ.ಸಿ.ಜಿ. ವಕೀಲರಿಂದ ಃ**

1. ಬಾತ್ಮೀ ಬಂದಾಗ ಚಾಸಾ-1 ರವರು ಡೋರನಹಳ್ಳಿ ಇದ್ದರು. ಚಾಸಾ-1 ರವರ ಮೊಬೈಲ್‌ಗೆ ಬಾತ್ಮೀದಾರರು ಕರೆ ಮಾಡಿ ವಿಷಯ ತಿಳಿಸಿರುತ್ತಾರೆ. ಘಟನಾ ದಿನದಂದು ನಾವು ನಮ್ಮ

ಇಲಾಖಾ ಇಂಟರ್ ಸಪ್ಟೆರ್ ವಾಹನದಲ್ಲಿ ಗಸ್ತು ಕರ್ತವ್ಯ ಮಾಡುತ್ತಿದ್ದೇವು. ಯಾವುದೇ ಮಹಜರ್ ಕ್ರಮ ಜರುಗಿಸಿ ಮುದ್ದೆ ಮಾಲುಗಳನ್ನು ಜಪ್ತಿಪಡಿಸಬೇಕಾದರೆ ಅದಕ್ಕೆ ಬೇಕಾಗುವ ಪೆನ್ನು, ಪೇಪರ್, ಇಲಾಖಾ ಮುದ್ರೆ ಎಲ್ಲಾ ಬೇಕಾಗುತ್ತದೆ ಎಂದರೆ ಸರಿ. ನಮಗೆ ಬಾತ್ಮೀ ಬಂದಿದ್ದಾಗ ನಮ್ಮ ಇಲಾಖಾ ಇಂಟರ್ ಸಪ್ಟೆರ್ ವಾಹನದಲ್ಲಿ ಇಲಾಖಾ ಮುದ್ರೆ ಇರಲಿಲ್ಲ ಆದರೆ ಬಾತ್ಮೀ ಬಂದ ನಂತರದಲ್ಲಿ ಅದನ್ನು ತರಿಸಿರುತ್ತೇವೆ. ಯಾವ ಸಿಬ್ಬಂದಿಯ ಮೂಲಕ ನಾವು ಇಲಾಖಾ ಮುದ್ರೆಯನ್ನು ತರಿಸಿರುತ್ತೇವೆ ಎಂದು ನನಗೆ ಈಗ ನೆನಪಿಲ್ಲ.

2. ಆರೋಪಿಯು ಮಧ್ಯಗಳನ್ನು ಸಂಗ್ರಹಿಸಿಯಿಟ್ಟಿದ್ದ ಚೀಲವು ಬಿಳಿ ಬಣ್ಣದ ಪ್ಲಾಸ್ಟೀಕ್ ಚೀಲವಾಗಿರುತ್ತದೆ. ಸದರಿ ಬಿಳಿ ಬಣ್ಣದ ಪ್ಲಾಸ್ಟೀಕ್ ಚೀಲವನ್ನು ತನಿಖಾಧಿಯವರು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ನಿಪಿ.1 ನ್ನು ಚಾಸಾ-1 ರವರು ಬರೆದಿರುತ್ತಾರೆ. ನಿಪಿ.1 ರಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ಮಧ್ಯವನ್ನು ಆರೋಪಿಯು ಎಲ್ಲಿಂದ ತಂದಿರುತ್ತಾರೆ ಎಂದು ಚಾಸಾ-1 ರವರು ಘಟನಾ ಸ್ಥಳದಲ್ಲಿ ಆರೋಪಿಯನ್ನು ವಿಚಾರಿಸಿರುತ್ತಾರೆ. ಘಟನಾ ದಿನದಂದೇ ನಾನು ತನಿಖಾಧಿಯವರಿಗೆ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

3. ಚಾಸಾ-1 ರವರ ಆದೇಶದ ಮೇರೆಗೆ ನೀವು ತನಿಖಾಧಿಕಾರಿಯವರಿಗೆ ನೀವು ಹೇಳಿಕೆಯನ್ನು ನೀಡಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಘಟನೆಯ ಬಗ್ಗೆ ತನಿಖಾಧಿಯವರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ನಾವು ಸದರಿ ದಿನದಂದು ಯಾವುದೇ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಆರೋಪಿಯಿಂದ ಯಾವುದೇ ಮಧ್ಯಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡದಿದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

1 ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಕೆ.ಆರ್.ನಗರ